ಇದೆ ಎನ್ನತಕ್ಕಂಥದ್ದನ್ನು ಗಮನಿಸಿದ್ದೇನೆ. ಈ ಹಿನ್ನೆಲೆಯಲ್ಲಿ ಇದುವರೆಗೂ ಸುಮಾರು ಹತ್ತು ಲಕ್ಷ ರೂಪಾಯಿಗಳನ್ನು ಸಬ್ಸಿಡಿಯಾಗಿ ಕೊಡತಕ್ಕಂಥ ಪ್ರಾವಿಷನನ್ನು ಮಾಡಿದ್ದೇನೆ. ಅಲ್ಲದೆ 320 ಗ್ರಾಮಗಳಲ್ಲಿ 11ಜಿಲ್ಲೆಯ ತೀವ್ರವಾದಂಥ ಈ ಖಾಯಿಲೆ ಕಂಡು ಬಂದಿರುವರಿಂದ 30 ಲಕ್ಷ ರೂಪಾಯಿಗಳನ್ನು ಏರ್ಪು ಮಾಡತಕ್ಕಂಥ ಯೋಜನೆಯನ್ನು ಹಾಕಿ ಹೆಚ್ಚು ಪರತಂತ್ರ ಜೀವಿಗಳನ್ನು ಉತ್ಪಾದನೆ ಮಾಡುವುದಕ್ಕೆ ಆಧ್ಯತೆಯನ್ನು ಹಾಕಿಕೊಂಡಿದ್ದೇವೆ. ಮತ್ತು ಬರ್ಖರವಾಗಿರತಕ್ಕಂಥ ಎಲ್ಲಾ ತೋಟಗಳಿಗೂ ಒಂದು ಕಡೆಯಿಂದ ಸಮರ ಸಿದತೆಯಲ್ಲಿ ಮಾಡತಕ್ಕಂಥದ್ದನ್ನು ಇಲಾಖೆಯ ವತಿಯಿಂದಲೇ ಮಾಡತಕ್ಕಂಥ ಕಾರ್ಯಕ್ರಮವನ್ನೆ ಕೂಡ ಹಾಕಿಕೊಂಡಿದ್ದೇವೆ. ಈಗಾಗಲೇ ಈ ಒಂದು ಕಾರ್ಯ ಆರಂಭವಾಗಿದೆ ಎನ್ನತಕ್ಕಂಥದ್ದನ್ನು ಅವರ ಗಮನಕ್ಕೆ ತರುತ್ತೇನೆ. ಮತ್ತು ಅವರು ದಕ್ಷಿಣ ಕನ್ನಡ ಜಿಲ್ಲೆಯಿಂದ ಎಲ್ಲಾ ಕಡೆಗೂ ಇದು ಪ್ರಸಾರವಾಗುತ್ತಿದೆಯೆಂದು ಏನು ಹೇಳಿದರು, ಅದು ಕೂಡ ಸತ್ಯ ಇರಬಹುದು. ಆದರೆ ಇರತಕ್ಕಂಥ ಖಾಯಿಲೆಯನ್ನು ನಿಯಂತ್ರಣ ಮಾಡುವುದಕ್ಕೆ ಇಲಾಖೆಯು ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಕೆ.ಜಿ. ಜಾರ್ಜ್ (ಪ್ರಶ್ನೆ ಸಂಖ್ಯೆ 67(134)) : ಇದು ಮುಖ್ಯಮಂತ್ರಿಯವರಿಗೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಇದು ಬಿ.ಡಿ.ಎ.ಗೆ. ಸಂಬಂಧಪಟ್ಟಿರತಕ್ಕಂಥದ್ದು ಇದಕ್ಕೆ ಸ್ವಲ್ಪ ಸಮಯ ಬೇಕು.

Mr. Speaker : I withold this question and take it up next week.

ತೋಟಗಾರಿಕೆ ಇಲಾಖೆಯಲ್ಲಿ ಜ್ಯೇಷ್ಠತೆ ಆಧಾರದ ಮೇಲೆ ಬಡ್ತಿ.

801 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) *ತೋಟಗಾರಿಕೆ ಇಲಾಖೆಯ ಡೈರೆಕ್ಟರ್ ಹುದ್ದೆಗೆ ಅಲ್ಲಿಯ ಹಿರಿಯ ಅಧಿಕಾರಿಗಳನ್ನೇ ನೇಮಕ ಮಾಡಬೇಕೆಂದು ತೀರ್ಮಾನ ಸರ್ಕಾರ ತೆಗೆದುಕೊಂಡಿದ್ದು, ಅದರಂತೆಯೇ ಅಲ್ಲಿಯ ಹಿರಿಯ ಅಧಿಕಾರಿಯೊಬ್ಬರನ್ನು ಡೈರೆಕ್ಟರಾಗಿ ನೇಮಿಸಿದ್ದದು ನಿಜವೇ?*

ಆ) *ಹಾಗಿದ್ದಲ್ಲಿ,ಈಗ ಹಾಲಿ ಖಾಲಿ ಇರುವ ಈ ಹುದ್ದೆಗೆ ಮೇಲಿನ ನೀತಿಯನ್ನು ಅನುಸರಿಸಿ ಹಿರಿಯ ಅಧಿಕಾರಿಗೆ ಬಡ್ತಿ ಕೊಟ್ಟು ನೇಮಿಸುವುದು ಅವಶ್ಯಕವಲ್ಲವೇ?*

ಶ್ರೀ ಜಿ.ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ನಿಜ

ಆ) ಹೌದು.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೇ, ತೋಟಗಾರಿಕೆ ಇಲಾಖೆಯಲ್ಲಿ ಡೈರೆಕ್ಟರ್ ಹುದ್ದೆ ಈಗ ಖಾಲಿ ಇದೆಯೇ? ಖಾಲಿ ಯಾವಾಗ ಆಯಿತು? ಅದನ್ನು ಯಾವಾಗ ಭರ್ತಿ ಮಾಡುತ್ತೀರಿ? ಭರ್ತಿ ಮಾಡುವುದಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದೀರಾ?

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೆ, ತೋಟಗಾರಿಕೆ ಇಲಾಖೆಯಲ್ಲಿ ಡೈರೆಕ್ಟರ್ ಹುದ್ದೆ ಖಾಲಿ ಇರುವುದು ನಿಜ. ಆ ಜಾಗಕ್ಕೆ ಆ ಇಲಖೆಯ ಹಿರಿಯ ಅಧಿಕಾರಿಗಳನ್ನೇ ಭರ್ತಿ ಮಾಡುತ್ತಿದ್ದೇವೆ ಹಾಗೂ ಸರ್ಕಾರ ಆಯಾಯ ಇಲಾಖೆಗಳಲ್ಲಿ ಇರುವಂಥ ಖಾಲಿ ಹುದ್ದೆಗಳನ್ನು ಅಲ್ಲಿರುವ ಹಿರಿಯ ಅಧಿಕಾರಿಗಳನ್ನು ನೇಮಕ ಮಾಡುವುದರ ಮೂಲಕ ತುಂಬಬೇಕೆಂಬ ನಿರ್ಣಯವನ್ನು ಈಗಾಗಲೇ ತೆಗೆದು ಕೊಂಡಿದೆ.

ಅಧ್ಯಕ್ಷರು: ನೀವು ಕೇಳುವುದನ್ನೂ ಅವರು ಮಾಡಿದ್ದೇವೆಂದು ಹೇಳಿದ್ದಾರೆ.

ವಿದ್ಯಾರ್ಥಿಗಳ ಅಧ್ಯಯನಕ್ಕೆ ಜನಗಣತಿಯಿಂದುಂಟಾದ ತೊಂದರೆ.